

ಭರವಸೆಯನ್ನೂ ಕೊಡುತ್ತಿಲ್ಲವೆಂದು ಹೇಳಿದರೆ, 'ನೀನೇ ನೋಡಿಕೋ ಮಾರಾಯ... ನನಗೀಗ ಇಲ್ಲಿ ರಜೆ ಸಿಗುತ್ತಿಲ್ಲ. ಜವಾಬ್ದಾರಿಯ ಹುದ್ದೆಯಲ್ಲವೇ, ಬಿಟ್ಟು ಬರುವ ಹಾಗೂ ಇಲ್ಲ' ಎಂದು ರಾಗವೆಳೆದಿದ್ದ.

ಹಾಗೆಯೇ ತಿಂಗಳುಗಟ್ಟಲೆ ಚಿಕಿತ್ಸೆಯ ಹೊರತಾಗಿಯೂ ಗುಣ ಕಾಣದೆ ಅಪ್ಪ ಸತ್ತೇ ಹೋಗಿದ್ದರು. ಈಗ ಮಾತ್ರ ತಮ್ಮ ಖಂಡಿತ ಬರುತ್ತಾನೆ ಎಂದು ತಿರುಗಿ ಫೋನ್ ಮಾಡಿದರೆ ಅವನದ್ದು ಅದೇ ಉತ್ತರ. 'ಈಗೆಲ್ಲ ರಜೆ ಸಿಕ್ಕುವುದಿಲ್ಲ ಇಲ್ಲಿ. ಒಂದು ವೇಳೆ ರಜೆ ಸಿಕ್ಕಿದರೂ ಊರಿಗೆ ಬರಲು ವಿಮಾನ ಪ್ರಯಾಣದ ಟಿಕೆಟ್ ಸಿಗಬೇಕಲ್ಲ. ಅದಕ್ಕೆ ಕನಿಷ್ಠ ವಾರವೆರಡು ವಾರವಾದರೂ ಮೊದಲೇ ಬುಕ್ ಮಾಡಬೇಕು. ನೀನೇ ಎಲ್ಲ ಕಾರ್ಯವನ್ನೂ ಮುಗಿಸಿಬಿಡು. ನಾನು ಇಲ್ಲಿಂದಲೇ ಕೈ ಮುಗಿದು ಬಿಡುತ್ತೇನೆ' ಎಂದಿದ್ದ. ಅದನ್ನೇ ಅಮ್ಮನೊಂದಿಗೆ ಹೇಳಿದರೆ ಆಕೆಯೂ ಆ ಬಗ್ಗೆ ಏನೂ ಹೇಳಲಿಲ್ಲ.

***

ಅಪ್ಪನ ಅಂತಿಮ ಕ್ರಿಯೆ ಮತ್ತು ಉತ್ತರ ಕ್ರಿಯೆಗಳನ್ನು ಅನುಕ್ರಮವಾಗಿ ಯಾವುದೇ ಕೊರತೆ ಬರದಂತೆ ನಡೆಸಿದ ಈ ಮಗ ಯಥೇಚ್ಛವಾಗಿ ದಾನ ಧರ್ಮಗಳನ್ನೂ ಮಾಡಿದ್ದ. ಎಲ್ಲವನ್ನೂ ಮುಗಿಸಿದ ಅವ ಮತ್ತು ಅವನ ಅಮ್ಮ ಇಬ್ಬರೂ ಸೋತು ಸುಣ್ಣವಾಗಿ ಕುಳಿತಿದ್ದಾರೆ. ಆದರೆ, ತಾಯಿ ಮಾತ್ರ ತೀರ ಹಚ್ಚಿಕೊಂಡಂತೆ ಕಾಣಿಸುತ್ತಿತ್ತು. ರಾತ್ರಿಯ ಹೊತ್ತು ನಿದ್ದೆ ಮಾಡದಿರುವುದಷ್ಟೇ ಅಲ್ಲ ಊಟ ತಿಂಡಿಯನ್ನೂ ಸರಿಯಾಗಿ ಮಾಡುತ್ತಿರಲಿಲ್ಲ. ಇವ ಒತ್ತಾಯ ಮಾಡಿದರೆ ತಿನ್ನುತ್ತಿದ್ದಳು ಅದೂ ಸ್ವಲ್ಪವೇ. 'ಯಾಕಮ್ಮ ಹೀಗೆ ಮಾಡುತ್ತೀಯ... ನಾವು ಇರುವಷ್ಟು ದಿನವಾದರೂ ಚನ್ನಾಗಿ ಬದುಕಬೇಕಲ್ಲವೇ' ಎಂದರೆ ತಾಯಿಯ ಉತ್ತರವೇ ಇಲ್ಲ.

ಎಲ್ಲ ಮುಗಿದ ಮೇಲೆ ಒಂದು ದಿನ ಅಪ್ಪ ಇದ್ದಷ್ಟು ದಿನವೂ ಇವನು ಕಣ್ಣೂ ಹಾಯಿಸದಿದ್ದ ಆ ಕಪಾಟಿನ ಬಾಗಿಲನ್ನು ತೆಗೆದು ಹಳೆಯ ಕಡತಗಳನ್ನೆಲ್ಲ ಒಂದೊಂದಾಗಿ ನೋಡತೊಡಗಿದ್ದ. ಇಷ್ಟು ದಿನಗಳ ವರೆಗೆ ಬರೀ ಕೆಲಸವನ್ನಷ್ಟೆ ಮಾಡಿಕೊಂಡು ಬರುತ್ತಿದ್ದ ಅವ ಇನ್ನು ಮುಂದೆ ಎಲ್ಲ ವ್ಯವಹಾರವನ್ನೂ ನೋಡಿಕೊಳ್ಳಬೇಕು. ಹಾಗೆಯೇ ಅಪ್ಪನ ಕಾರ್ಯಕ್ರಮಗಳಿಗೆ ಇವನ ಮೇಲಿನ ನಂಬಿಕೆಯಿಂದ ಕೇಳಿದ್ದನ್ನೆಲ್ಲ ಕೊಟ್ಟ ಮಂದಿಗೆ ಹಣವನ್ನೂ ಕೊಡಬೇಕಲ್ಲ. ಹಾಗಾಗಿಯೇ ಕಪಾಟಿನ ಬಾಗಿಲನ್ನು ತೆಗೆದದ್ದು.

ನೋಡ ನೋಡುತ್ತಿದ್ದಂತೆ ಇವನಿಗೆ ತಲೆ ಸುತ್ತು ಬರುವಂತಾಯ್ತು. ಅಪ್ಪ ತನ್ನ ಆಸ್ತಿಯನ್ನೆಲ್ಲ, ಬ್ಯಾಂಕಿನಲ್ಲಿಟ್ಟಿದ್ದ ಹಣವನ್ನೂ ಸೇರಿ ಆ ಚಿಕ್ಕ ಮಗನ ಹೆಸರಿಗೆ ಮಾಡಿಸಿ ಇಟ್ಟಿದ್ದ ಪತ್ರಗಳು ಕಾಣಿಸಿದ್ದವು. ತಾರೀಕು ನೋಡಿದರೆ ಅವೆಲ್ಲವೂ ಅವನು ಅಮೆರಿಕಕ್ಕೆ ಹೋದ ಮೇಲೆಯೇ ಮಾಡಿದ್ದು. ಅಮ್ಮನ ಹೆಸರಿಗೂ ಏನೂ ಇಲ್ಲ. ಇವನಿಗೆ ತಲೆ ಧಿಮ್ಮೆನ್ನತೊಡಗಿತು. ಜೊತೆಗೇ ಕಣ್ಣು ಕತ್ತಲೆ ಕಟ್ಟಿದಂತೆಯೂ. ವಾರಗಟ್ಟಲೆ ಊಟ, ತಿಂಡಿ, ಹಾಗೆಯೇ ನಿದ್ದೆಯನ್ನೂ ಸರಿಯಾಗಿ ಮಾಡದೇ ಇದ್ದುದರಿಂದಲೂ ಇರಬಹುದು. ಆದರೆ, ಎದುರಿಗಿದ್ದ ದಾಖಲೆಗಳು ಮಾತ್ರ ಎಲ್ಲವನ್ನೂ ಮೀರಿಸಿ ಅವನಿಗೆ ತಲೆ ತಿರುಗುವಂತೆ ಮಾಡಿದ್ದವು. ಇನ್ನೇನು ಬಿದ್ದೇ ಬಿಡುತ್ತಿದ್ದನೋ ಏನೋ. ಅಷ್ಟರಲ್ಲಿ ಮಗ ದಾಖಲೆಗಳನ್ನು ನೋಡುತ್ತಿದ್ದುದನ್ನು ಗಮನಿಸಿದ ತಾಯಿ ಅಲ್ಲಿಗೆ ಬಂದವಳು ಮಗನನ್ನು ಹಿಡಿದುಕೊಂಡಿದ್ದಳು. ಮಾತಾಡುವುದನ್ನೇ ನಿಲ್ಲಿಸಿದ್ದ